ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

Monday 22nd January 1979. Magha 2, 1900 S.E.

The House met in the Assembly Chamber, Vidhana Soudha at One of the Clock.

[MR. SPEAKER (SRI P. VENKATARAMANA) in the Chair.]

Seeking Permission to make a statementby the leader of the opposition before Question hour.

†SRI S.R.BOMMAI (Hubli).—I have given a notice again just to review your ruling so far as my motion is concerned–a ruling which you gave on Saturday. I think this is a very important and serious matter We have also to consider the matter very deeply. It would be better if the HOUSE is adjourned for an hour or so. Meanwhile we can discuss the matter and come to some conclusion.

ಶ್ರೀ ಬಿ.ಭಾಸ್ಕರ ಶೆಟ್ಟಿ:—ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ಗಂಟೆ ಕಾಲ ಸಭೆಯನ್ನು ಮುಂದೂಡಬೇಕು ಎಂದು ಹೇಳುತ್ತಾ ಇದ್ದಾರೆ. ಅದು ಒಳ್ಳೆಯ ಅಭಿಪ್ರಾಯ. ಅವರಿಗೆ ಏನಾದರೂ ತೊಂದರೆ ಇದ್ದರೆ ಸಭೆಯನ್ನು ಒಂದು ಗಂಟೆ ಕಾಲ ಮುಂದೂಡುವುದಕ್ಕೆ ನಮ್ಮ ಅಭ್ಯಂತರವಿಲ್ಲ. ಎರಡು ಗಂಟೆಗೆ ಪುನಃ ಸಭೆ ಸೇರಬಹುದು.

MR. SPEAKER.—Since the House is agreeable to this suggestion, we will adjourn now and meet again at 2PM today.

The House rose at Five Minutes past one of the Clock and reassembled at Three of the Clock.

[MR. SPEAKER In the Chair]

STARRED QUESTION

(ಪ್ರಶ್ನೋತ್ತರಗಳು)

ಅಧ್ಯಕ್ಷರು.— ಶ್ರೀ ಟಿ.ಬಿ. ಜಯಚಂದ್ರ ಅವರು ತಮ್ಮ ಪ್ರಶ್ನೆಯನ್ನು ಕೇಳಬಹುದು.

Request to postpone Question hour.

ಶ್ರೀ ಟಿ.ಬಿ. ಜಯಚಂದ್ರ.— ನಾನು ಪ್ರಶ್ನೆ ನಂಬರ್ ೧ನ್ನು ಕೇಳುತ್ತೇನೆ.

ಶ್ರೀ ಎಂ. ಮಲ್ಲಪ್ಪ.—ಉತ್ತರಗಳು ಆಚ್ಚಾಗಿವೆ.

ಶ್ರೀ ಭಾವೂರಾವ್ ದೇಶಪಾಂಡೆ.—ಸ್ವಾಮಿ, ನಮ್ಮ ವಿರೋಧಪಕ್ಷದ ನಾಯಕರು ಸಭೆಗೆ ಬರುವಪರಿದ್ದಾರೆ. ಅವರು ಸಭೆಗೆ ಬಂದು ಹೇಳಿಕೆ ಕೊಡಲಿಕ್ಕೆ ಅವಕಾಶ ಕೊಡಬೇಕು. ಡಿಸೆಂಬರ್ ೧೯, ೨೦, ೨೧ರಂದು ನಡೆದ ಹತ್ಯಾಚಾರದ ಬಗ್ಗೆ, ಗೂಂಡಾಗಿರಿಯ ಬಗ್ಗೆ ತಾವು ನ್ಯಾಯಾಂಗ ತನಿಖೆ ನಡೆಸಬೇಕು ಎಂದು ನಮ್ಮ ಬೇಡಿಕೆ ಇದ್ದರೂ ತಾವು ಈಗ ಪ್ರಶ್ನೆಗಳನ್ನು ತೆಗೆದುಕೊಂಡಿದ್ದೀರಿ. ನಮ್ಮ ಬೇಡಿಕೆಗಳಿಗೆ ಒಪ್ಪುವವರೆಗೆ ನಾವು ಸಭೆಯ ಕಾರ್ಯಕಲಾಪಗಳು ನಡೆಯುವುದಕ್ಕೆ ಅವಕಾಶ ಕೊಡುವುದಿಲ್ಲ. ಸರ್ಕಾರದವರು ನ್ಯಾಯಾಂಗ ತನಿಖೆ ಮಾಡುವುದಕ್ಕೆ ಏಕೆ ಹೆದರುತ್ತಾರೋ? ಸರ್ಕಾರದವರು ಇದಕ್ಕೆ ಒಪ್ಪದೆ ಇದ್ದರೆ, ನಾವು ಸಭೆಯ ಕಾರ್ಯಕಲಾಪಗಳು ನಡೆಯುವುದಕ್ಕೆ ಅವಕಾಶ ಕೊಡುವುದಿಲ್ಲ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಕಳೆದ ಮೂರು ದಿವಸಗಳಿಂದ ನಾವು ನಮ್ಮ ಬೇಡಿಕೆಗಳನ್ನು ಕೇಳುತ್ತಿದ್ದರೂ ಸಹ ತಾವು ಈಗ ಪ್ರಶ್ನೆಯನ್ನು ಕೇಳುವುದಕ್ಕೆ ಅವಕಾಶ ಕೊಟ್ಟಿದ್ದೀರಿ.

ಅಧ್ಯಕ್ಷರು.—ನಾವು ಬಿಸಿನೆಸ್ ಅಡ್‌ವೈಸರಿ ಕಮಿಟಿಯಲ್ಲಿ ಸೇರಿ, ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ತೀರ್ಮಾನ ಮಾಡಿದ್ದೇವೆ. ಅದರಂತೆ, ಶುಕ್ರವಾರ ರಜೆ ಇದ್ದು, ಶನಿವಾರದ ದಿವಸ ಒಂದು ದಿನ ನಾವು ರಜೆಯನ್ನು ಡಿಕ್ಲೇರ್ ಮಾಡಿ ದಿನಾಂಕ ೨೯ರಂದು ಈ ಕಾರ್ಯಕ್ರಮ ಗಳನ್ನು ಮುಗಿಸೋಣ ಎನ್ನುವುದಕ್ಕೆ ಒಪ್ಪಿಗೆ ದೊರಕಿದೆ. ಕಳೆದ ಎರಡು ದಿವಸಗಳಿಂದ ನಡೆದಿರತಕ್ಕ ಸಭೆಯ ನಡವಳಿಕೆಗಳನ್ನು ನೋಡಿದರೆ ಆದು ಸಭೆಯ ಘನತೆಗೆ ಗೌರವ ತರುವುದಲ್ಲ. ತಾವುಗಳು ತಮ್ಮ ಕ್ಷೇತ್ರದ ಜನತೆಗೆ ನ್ಯಾಯವನ್ನು ದೊರಕಿಸಿಕೊಡಬೇಕು; ಮತ್ತು ಈ ಮನೆಗೆ ಗೌರವ ಕೊಡಬೇಕು. ಈ ಮನೆಯ ಕೆಲಸ ಗಳನ್ನು ಸುಗಮವಾಗಿ ನಡೆಸಿಕೊಂಡು ಹೋಗುವುದಕ್ಕೆ ತಾವು ಅವಕಾಶ ಕೊಡಬೇಕು. ಮಾನ್ಯ ವಿರೋಧ ಪಕ್ಷದ ನಾಯಕರು ನಾವು ಪ್ರಶ್ನೆಗಳನ್ನು ಕೇಳುವುದಕ್ಕೆ ಅವಕಾಶ ಕೊಡುತ್ತೇವೆಂದು ಹೇಳಿದ್ದಾರೆ. ಇದಕ್ಕೆ ಮನೆಯ ನಾಯಕರು ಒಪ್ಪಿಕೊಂಡಿದ್ದಾರೆ. ನಾನು ಈ ಪ್ರಪಂಚದಲ್ಲಿ ಈ ಸಂಬಂಧದಲ್ಲಿ ಇರತಕ್ಕ ಒಂದಾದರೂ ಪ್ರಿಸಿಡೆಂಟನ್ನು ತೋರಿಸಿ, ರೂಲ್ಸನ್ನು ಹೇಳಿ ಎಂದು ಕೇಳಿದರೂ ತಾವುಗಳು ಯಾರೂ ಹೇಳಲಿಲ್ಲ. ನಾವು ಈಗ ಪ್ರಶ್ನೋತ್ತರ ವೇಳೆಯನ್ನು ಬದಲಾವಣೆ ಮಾಡುವುದಕ್ಕಾಗುವುದಿಲ್ಲ. ಪ್ರಶ್ನೋತ್ತರ ವೇಳೆಯಾದ ಮೇಲೆ ವಿರೋಧ ಪಕ್ಷದ ನಾಯಕರು ತಮ್ಮ ಹೇಳಿಕೆಯನ್ನು ಮಾಡಲಿಕ್ಕೆ ಅವಕಾಶ ಕೊಡಲು ಒಪ್ಪಿಗೆಯಾಗಿದೆ. ಇದಕ್ಕೆ ಅವಕಾಶ ಕೊಟ್ಟು ಒಂದು ಗಂಟೆಕಾಲ ಸಭೆಯನ್ನು ಮುಂದೂಡ ಲಾಗಿತ್ತು. ಈಗ ಮತ್ತೆ ತಾವು ಆದನ್ನೇ ರಿಪೀಟ್ ಮಾಡಿದರೆ ಅದು ಸಮಂಜಸವಾಗುವುದಿಲ್ಲ. ನಾನು ಬಹಳ ಕರಿಣವಾಗಿ ಹೇಳುತ್ತಿದ್ದೇನೆ. ಈಗಾಗಲೇ ನಾನು ಪ್ರಶ್ನೆಗಳನ್ನು ಕೇಳಲಿಕ್ಕೆ ಸದಸ್ಯರ ಹೆಸರನ್ನು ಕರೆದಿದ್ದೇನೆ, ಮಂತ್ರಿಗಳು ಉತ್ತರ ಆಚ್ಚಾಗಿದೆ ಎಂದು ಹೇಳಿದ್ದಾರೆ, ತಾವು ಮತ್ತೆ ಆದನ್ನೆ ಹೇಳುತ್ತಿದ್ದೀರಿ.

ಶ್ರೀ ಎಸ್.ಆರ್. ಬೊಮ್ಮಾಯಿ.—ಐ ಆ್ಯಮ್ ಸಾರಿ, ತಾವು ಸಭೆಯನ್ನು ಒಂದು ಗಂಟೆಯ ಕಾಲ ಮುಂದೂಡಿದ್ದೀರಿ ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಮೊನ್ನೆಯ ದಿವಸ ಸಭೆಯನ್ನು ಅರ್ಧ ಗಂಟೆಯ ಕಾಲ ಮುಂದೂಡಿ ನಾಲ್ಕು ಗಂಟೆಗಳ ನಂತರ ಸೇರಿದ್ದುದು ನನಗೆ ಗೊತ್ತಿದೆ. ಈ ಮನೆಯ ಕಾರ್ಯಕಲಾಪಗಳು ಸುಗಮವಾಗಿ ನಡೆಯಬೇಕು ಎನ್ನುವ ದೃಷ್ಟಿಯಿಂದ ನಮ್ಮ ಪಕ್ಷದ ಸಭೆಯನ್ನು ಕರೆದು, ಸದಸ್ಯರೊಂದಿಗೆ ಇದೇ ವಿಚಾರವನ್ನು ನಾನು ಪ್ರಸ್ತಾಪ ಮಾಡುತ್ತಿರುವಾಗ ತಾವು ಈ ರೀತಿಯಾಗಿ ಸಭೆಯನ್ನು ಕರೆದು ಪ್ರಶ್ನೋತ್ತರಗಳನ್ನು ನಡೆಸುವುದಕ್ಕೆ ಪ್ರಾರಂಭಮಾಡಿರುವ ರೀತಿಯನ್ನು ನೋಡಿದರೆ, ತಾವು ನಡೆದುಕೊಂಡ ರೀತಿಯ ಬಗ್ಗೆ ನಮಗೆ ವಿಷಾದವಾಗಿಂತ್ತದೆ. *** *** ನಮ್ಮ ಪಕ್ಷದ ಸಭೆಯನ್ನು ಕರೆದು ಚರ್ಚೆ ಮಾಡತಕ್ಕ ಕಾಲದಲ್ಲಿ, ಇಲ್ಲಿ ಸಭೆ ಕರೆದು, *** *** ಈ ರೀತಿ ಎಲ್ಲಿಯೂ ಆಗುವುದಿಲ್ಲ, ನಮಗೆ ತಮ್ಮ ಬಗ್ಗೆ ಗೌರವ ಇದೆ. ನಾವು ಈ ವಿಷಯವನ್ನು ಚರ್ಚೆಮಾಡಿ ನಮ್ಮ ಸದ್ಯೋದ್ಯೋಗಿಗಳ ಒಪ್ಪಿಗೆ ಪಡೆಯುವುದಕ್ಕೆ ಹೋದರೆ, ಇಲ್ಲಿ ತಾವು ಸಭೆ ಪ್ರಾರಂಭ ಮಾಡಿದ್ದೀರಿ ಏನು ಈ ರೀತಿಯಾಗಿ ಸಭೆಯನ್ನು ಕರೆಯುತ್ತಿದ್ದೇನೆಂದು *** ***

(ವಿರೋಧಪಕ್ಷದ ಅನೇಕ ಸದಸ್ಯರಿಂದ ಷೇಮ್, ಷೇಮ್ ಎಂದು ಕೂಗು ಬರುತ್ತಿತ್ತು)

*** Matter expunged as ordered by the chair.

ನಾನು ನಮ್ಮ ಸೆಕ್ರೆಟರಿಯನ್ನು ತಮ್ಮ ಹತ್ತಿರ ಕಳುಹಿಸಿಕೊಟ್ಟಿದ್ದೇನೆ ಇನ್ನೂ ನಮ್ಮ ಪಕ್ಷದ ಸಭೆಯಲ್ಲಿ ಈ ವಿಚಾರ ಚರ್ಚೆಯಾಗುತ್ತಿದೆ, ನಮಗೆ ಇನ್ನೂ ಸ್ವಲ್ಪ ಅವಕಾಶ ಕೊಡಬೇಕು ಎಂದು ನಾನು ಹೇಳಿಕಳುಹಿಸಿದ್ದೇನೆ. ನಾನು ನಮ್ಮ ಸದಸ್ಯರುಗಳ ಮನವೊಲಿಸಿ, ಸಭೆಯ ಕಾರ್ಯಕಲಾಪಗಳಿಗೆ ಅವಕಾಶ ಕೊಡಬೇಕು, ಸಹಕಾರ ಕೊಡಬೇಕು ಎನ್ನುವ ಉದ್ದೇಶದಿಂದ ಇರುವಾಗ ಇಲ್ಲಿ ತಾವು ಸಭೆಯನ್ನು ಕರೆದರೆ ಇದು ಸರಿಯೇ ಸ್ವಾಮಿ?

ಅಧ್ಯಕ್ಷರು.—ಮೊದಲೇ, ಸಭೆಯನ್ನು ಎರಡು ಗಂಟೆಗೆ ಪ್ರಾರಂಭಿಸಬೇಕು ಎಂದು ತೀರ್ಮಾನವಾಗಿದೆ ತಾವು ನಮ್ಮ ವಿಪ್ ಹತ್ತಿರ ಬಂದು ನಮಗೆ ಇನ್ನೂ ಸ್ವಲ್ಪ ಅವಕಾಶ ಬೇಕು ಎಂದಿದ್ದರೆ ಸರಿಯಾಗಿತ್ತು. ನಾವು ಮೂರು ಗಂಟೆಗೆ ಬೆಲ್ ಹೊಡಿಸಬೇಕು ಎಂದು ಹೇಳಿದ್ದರಿಂದ ಮೂರು ಗಂಟೆಗೆ ಬೆಲ್ ಮಾಡಿಸಿದ್ದೇನೆ. ತಾವು ಈ ರೀತಿ ನಮ್ಮ ಮೇಲೆ ದೋಷ ಮಾಡತಕ್ಕದ್ದು ಸರಿಯಲ್ಲ.

ಶ್ರೀ ಎಸ್.ಆರ್.ಬೊಮ್ಮಾಯಿ.—ತಾವು ಅನೇಕ ಸಾರಿ ಅರ್ಧ ಗಂಟೆಯವರೆಗೆ ಸಭೆಯನ್ನು ಮುಂದೂಡಿ, ನಾಲ್ಕು ಗಂಟೆಯಾದನಂತರ ಮತ್ತೆ ಸಭೆ ಸೇರಿಸಿದ್ದೀರಿ. ಈಗ ಸಭೆಯನ್ನು ಪ್ರಾರಂಭ ಮಾಡುತ್ತಿದ್ದೇವೆ ಎಂದಾದರೂ ನಮಗೆ ಹೇಳಿಕಳುಹಿಸಬಾರದೇ? You are obeying the Whip of the Ruling Party. I am very sorry..... ..

ಅಧ್ಯಕ್ಷರು.—ನಿಮ್ಮ ಮಾತಿನ ಮೇಲೆ ಪ್ರಜ್ಞೆ ಇದೆಯೇ? ತಾವು ಸರಿಯಾಗಿ ನಡೆದುಕೊಳ್ಳುತ್ತಿದ್ದೀರಾ?

(ವಿರೋಧ ಪಕ್ಷದ ಸದಸ್ಯರುಗಳೆಲ್ಲರೂ ಒಟ್ಟಿಗೆ ಎದ್ದು ನಿಂತು, ಕೂಗುತ್ತಾ ಅಧ್ಯಕ್ಷರ ಪೀಠದತ್ತ, ಧಾವಿಸಿದರು)

*** *** ***

ಅಧ್ಯಕ್ಷರು.—ಮಾನ್ಯ ಸದಸ್ಯರುಗಳು ಮಾತನಾಡುವುದನ್ನು ರೆಕಾರ್ಡ್ ಮಾಡುವುದು ಬೇಡ.

†SRI D.DEVARAJ URS (Chief Minister).—Sir, have I your permission to say something?

SRI S.R.BOMMAI.—The house is not in order, Sir

SRI D.DEVARAJ URS.—With all the emphasis at my command I am requesting the Leader of the Opposition and other hon Members to resume their seats and allow the proceedings of the House to go on.

A MEMBER.—The Speaker has to apologise for using that word.

SRI D.DEVARAJ URS.—On the otherhand, you have to apologise for all the way in which you have been conducting. The Speaker has gone out of the way to concede the time required to the Opposition Leader. From One O'clock it has dragged on to 3 O'clock and if the Assembly had been called to meet at 3 O'clock I am sorry to say that the Leader of the Opposition should not blame anybody for it In case he thought he wanted some more time he could have sent word to you asking for some more time upto 3 O,clock or 4 O'clock. Instead of doing that, coming here and accusing the Speaker is thoroughly unfair. It should not have been done. My humble appeal to them is that let them kindly resume their seats and say whatever they want to say. It has been conceded that they have a right to say whatever

---

***Matter expunged as ordered by the Chair.

they want to say after the question hour is over. Now, to come again and make noise not only make noise but to call the Speaker names and to talk irrelevantly about the speaker this is all beyond the limits of parliamentary practice and procedure and they do not seem to have any kind of regard or respect for the Speaker or to the House. Under these circumstances I again appeal to them resume their seats. Otherwise, the Speaker will have to take charge of the House and see that the house conducts business.

(The Opposition Members in aisle began to speak)

SRI D.DEVARAJ URS :—They cannot say anything.

SRI S.R.BOMMAI.—The Chief Minister also cannot say anything. We have not concluded the discussion and we wanted still some more time. I have made a request for that. In the meantime Sri Bhaskar Shetty has agreed to call the House at 3 O'clock.

MR.SPEAKER.—First please resume your seats.

SRI S.R.BOMMAI.—It is not possible.

ಶ್ರೀ ಬಿ.ಭಾಸ್ಕರಶೆಟ್ಟಿ.—ವಿರೋಧಪಕ್ಷದ ನಾಯಕರು ತಪ್ಪು ಅಭಿಪ್ರಾಯ ಕೊಡುತ್ತಿದ್ದಾರೆ. ಮೊದಲು ಅವರ ಪಕ್ಷದ ಶ್ರೀ ಅರಕೇರಿಯವರು ಅರ್ಧ ಗಂಟೆಯ ಹೆಚ್ಚಿನ ಸಮಯ ಬೇಕೆಂದು ಕೇಳಿದರು ಅರ್ಧ ಗಂಟೆ ಕಳೆದಮೇಲೂ ಸಹ ಅವರು ಬೀಗ ಹಾಕಿಕೊಂಡು ಒಳಗಡೆ ಮೀಟಿಂಗ್ ನಡೆಸುತ್ತಿದ್ದರು. ಆಗ ಶ್ರೀ ಅರಕೇರಿಯವರನ್ನು ಕರೆದು ಕೇಳಿದಾಗ ೩ ಗಂಟೆಗೆ ಮುತ್ತೆ ಸಭೆ ಕರೆಯಲು ಒಪ್ಪಿದರು. ಇದು ಸತ್ಯ ಸಂಗತಿ. ಇಲ್ಲದಿದ್ದರೆ ಇನ್ನೂ ಹೆಚ್ಚಿನ ಸಮಯ ಬೇಕೆಂದು ಹೇಳಿ ಕಳುಹಿಸಬಹುದಾಗಿತ್ತು. ಆದರೆ ಈಗ ಏನಾದರೂ ಒಂದು ಕಾರಣ ಹುಡುಕುವುದಕ್ಕಾಗಿ ಈ ರೀತಿ ಮಾತನಾಡುತ್ತಿದ್ದಾರೆ.

ಕೆಲವು ಮಾನ್ಯ ಸದಸ್ಯರು.—ಹಾಗಿದ್ದರೆ ನಾವು ಪ್ರಶ್ನೆ ಇಲ್ಲವೆ ಮಾತನಾಡುತ್ತಿದ್ದೇವೆಂದು ಅಧ್ಯಕ್ಷರು ಹೇಳಿದ್ದು ಸರಿಯೇ?

ಶ್ರೀ ಜೆ.ಎಚ್. ಪಟೇಲ್:—ವಿಷಯ ಏನೆಂಬುದು ಸರ್ಕಾರದವರಿಗೆ ಗೊತ್ತಿದೆ. ಅವರಿಗೆ ಗೊತ್ತಿದ್ದರೂ ಸಹ ಗೊತ್ತಿಲ್ಲದಂತೆ ನಡೆದುಕೊಳ್ಳುತ್ತಿದ್ದಾರೆ.

ಅಧ್ಯಕ್ಷರು:—ತಾವು ಏನಾದರೂ ಹೇಳುವುದಿದ್ದರೆ ತಮ್ಮ ಸ್ಥಾನಕ್ಕೆ ಬಂದು ಹೇಳಿ.

ಶ್ರೀ ಜೆ.ಎಚ್.ಪಟೇಲ್.—ನಾವು ಇಲ್ಲಿದ್ದಾಗ ಮುಖ್ಯಮಂತ್ರಿಗಳು ಮಾತನಾಡುತ್ತಾರೆ: ಅದರಂತೆ ನಾವು ಮಾತನಾಡಿದರೆ ಏನು ತಪ್ಪು? ಈ ಸದನಕ್ಕೆ ಗೌರವ ಕೊಡಬೇಕು, ಕಾನೂನಿಗೆ ಗೌರವ ಕೊಡಬೇಕು ಎಂದು ತಮ್ಮ ಅನುಮತಿ ಪಡೆದುಕೊಂಡು ಈಗಿನ ಸಮಸ್ಯೆಗೆ ಒಂದು ಪರಿಹಾರವನ್ನು ಕಂಡುಹಿಡಿಯುವ ಸಲುವಾಗಿ ನಮ್ಮ ನಾಯಕರು ನಮ್ಮ ಸ್ನೇಹಿತರೆಲ್ಲಾ ಸೇರಿ ಮೀಟಿಂಗ್ ಮಾತುಕತ್ತಿದ್ದೆವು. ನಾವು ಮೀಟಿಂಗ್ ಮುಗಿಸುವವರೆಗೂ ತಾವು ಕಾಯಬಹುದಾಗಿತ್ತು. ಈ ಮಧ್ಯೆ ಈ ಒಂದು ಸಮಸ್ಯೆಗೆ ಪರಿಹಾರವನ್ನು ಮುಖ್ಯಮಂತ್ರಿಗಳು ಕಂಡುಹಿಡಿಯಬೇಕಾಗಿತ್ತು. ಈ ಸಮಸ್ಯೆಗೆ ಯಾವುದೇ ಪರಿಹಾರ ಇಲ್ಲದಿದ್ದರೆ ಸಮಾಜದಲ್ಲಿ ಶಾಂತಿ ಇರುವುದಿಲ್ಲ. ಸಮಾಜದಲ್ಲಿ ಶಾಂತಿ ಇಲ್ಲದಿದ್ದರೆ ಇಲ್ಲಿಯೂ ಶಾಂತಿ ಇರುವುದಿಲ್ಲ.

ಶ್ರೀ ಜಿ.ಕೆ.ತಕ್ಕೇದ್:—ಉತ್ತರ ಪ್ರದೇಶದಲ್ಲಿ ಏನು ನಡೆಯುತ್ತಿದೆ ಎಂಬುದನ್ನು ಸ್ವಲ್ಪ ಹೇಳುತ್ತೀರ?

SRI D DEVARAJ URS.—I again make an appeal and request the Hon. the Leader of the Opposition and others to go to their seats and then say whatever they want to say. If he wants some more time, let him have it: I have no objection. But there is no point in standing there and talking about what should be done and what should not be done.

MEMBERS.—Let the Speaker withdraw the word.

SRI D.DEVARAJ URS.—You have to withdraw so many things. That can never be done. If they do not need your word, it is left to them; the whole responsibility rests on them.

ಅಧ್ಯಕ್ಷರು.—ಈಗಾಗಲೇ ಸಾಕಷ್ಟು ಕಾಲ ವಿಳಂಬವಾಗಿದೆ. ಆದ್ದರಿಂದ ಮಾನ್ಯ ಸದಸ್ಯರು ತಮ್ಮ ತಮ್ಮ ಸೀಟುಗಳಿಗೆ ಹೋಗಿ ದಯವಮಾಡಿ ಕುಳಿತುಕೊಳ್ಳಿ.

ಶ್ರೀ ಎ. ಲಕ್ಷ್ಮಿಸಾಗರ್.—ಈಗ ತಾವೇನು ಅನ್ ಪಾರ್ಲಿಮೆಂಟರಿ ಶಬ್ದವನ್ನು ಉಪಯೋಗ ಮಾಡಿದ್ದೀರಿ ಅದನ್ನು ಮೊದಲು ವಾಪಸ್ಸು ತೆಗೆದುಕೊಳ್ಳಬೇಕು.

ಅಧ್ಯಕ್ಷರು.—ನಾನು ಉಪಯೋಗ ಮಾಡಿದ ಪದ ಅನ್ ಪಾರ್ಲಿಮೆಂಟರಿ ಆಗಿದ್ದರೆ ನಾನು ಅದನ್ನು ಸರಿಪಡಿಸುತ್ತೇನೆ ನನಗೆ ಯಾವ ಸದಸ್ಯರ ಮನಸ್ಸನ್ನೂ ನೋಯಿಸಬೇಕೆಂಬ ಇಚ್ಛೆ ಇಲ್ಲ. ಆದ್ದರಿಂದ ಈಗ ಮಾನ್ಯ ಸದಸ್ಯರೆಲ್ಲರೂ ತಮ್ಮ ತಮ್ಮ ಸೀಟುಗಳಿಗೆ ಹೋಗಿ ದಯವಾಮಾಡಿಕುಳಿತುಕೊಳ್ಳಿ ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ತಮ್ಮ ವಿಚಾರ ಏನಿದೆ ಅದನ್ನು ಪ್ರಸ್ತಾಪಮಾಡಿ ಆ ಮೇಲೆ ತಮಗೆ ಅರ್ಧಗಂಟೆ ಬೇಕೋ ಅಥವಾ ಮುಕ್ಕಾಲು ಗಂಟೆ ಬೇಕೋ ಸಭೆಯನ್ನು ಮುಂದಕ್ಕೆ ಹಾಕಿ ಆಲೋಚನೆ ಮಾಡೋಣ.

ಶ್ರೀ ಪಿ. ರಾಮದೇವ್.—ಈ ರಾಜ್ಯದಲ್ಲಿ ವಿರೋಧಪಕ್ಷದವರಿಗೆ ಗೌರವವಿಲ್ಲ.

MR. SPEAKER.—I appeal to the members of the opposition to go to their seats.

SRI D. DEVARAJ URS.—Sir, there is a limit to patience Now the Hon. Speaker is left with no option but to name them.

MR. SPEAKER.—I once again request the Hon. Leader of the Opposition to please give a lead in this matter. I again repeat that if the word has offended I will certainly with draw it.

(*Hon. Members took their seats*)

† ಶ್ರೀ ಜೆ. ಎಚ್. ಪಟೀಲ್ (ಚೆನ್ನಗಿರಿ).—ಅಧ್ಯಕ್ಷರೇ ಕಳೆದ ಎರಡು ದಿನಗಳಿಂದ ಮತ್ತು ಮೂರನೆಯ ದಿನವಾದ ಇವೊತ್ತೂ ಕೂಡ ನಾವು ಅತ್ಯಂತ ಭಾರವಾದ ಮನಸ್ಸಿನಿಂದ ಈ ಕಾರ್ಯಕ್ರಮವನ್ನು ನಾವು ನಡೆಸಿಕೊಂಡು ಬಂದಿದ್ದೇವೆ. ನಮಗೆ ಈ ಸಭೆಯ ಬಗ್ಗೆ ಆಗಲೀ ಪಾರ್ಲಿಮೆಂಟ್ ಸಿಸ್ಟಬಗ್ಗೆ ಆಗಲೀ ಅಗೌರವ ಇದೆ ಎಂದು ತಾವು ಭಾವಿಸಬಾರದು. ಸರ್ಕಾರದ ಹೊಣೆಗೇಡಿತನವನ್ನು ಗುರುತಿಸುವುದಕ್ಕೆ ಮತ್ತು ಮನವರಿಕೆ ಮಾಡುವುದಕ್ಕೋಸ್ಕರ ಈ ಸದನದ ಹೊರಗಡೆ ಸಾಕಷ್ಟು ನಾವು ಪ್ರಯತ್ನವನ್ನು ಮಾಡಿದ್ದೇವೆ. ಈ ಬಗ್ಗೆ ನಮ್ಮ ಪಕ್ಷದ ನಾಯಕರ ಒಂದು ಬೇಡಿಕೆಯೂ ಇದೆ. ನಮ್ಮ ರಾಜ್ಯದಲ್ಲಿ ಎಂಥಾ ಘಟನೆಗಳು ನಡೆದಿವೆ ಎಂಬುದು ಪತ್ರಿಕೆಗಳ ಮೂಲಕ ಮತ್ತು ಪ್ರಕಟಣೆಗಳ ಮೂಲಕ ಎಲ್ಲಾ ರೀತಿಯಿಂದಲೂ ಎಲ್ಲರೂ ಮನಗಂಡಿದ್ದಾರೆ ಆ ಘಟನೆಗಳ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿಯೂ ಸಹ ಪ್ರಸ್ತಾಪ ಮಾಡಿದ್ದಾರೆ. ಇದನ್ನು ಸರ್ಕಾರದವರೇ ಅರಿತು ಮಾಡಬೇಕಾದ ಕೆಲಸ, ಈ ಘಟನೆಗಳು ರಾಜ್ಯದಲ್ಲಿ ನಡೆದಾಗ ವಿಧಾನ ಸಭೆ ಅಧಿವೇಶನದಲ್ಲಿ ಇರಲಿಲ್ಲ. ಆದರೆ ಸರ್ಕಾರಕ್ಕೆ ಜವಾಬ್ದಾರಿ ಇರುವುದ

ರಿಂದ ಅವರು ತಮ್ಮ ಜವಾಬ್ದಾರಿಯನ್ನು ಅರಿತು ತಮ್ಮ ಕರ್ತವ್ಯವನ್ನು ಮಾಡಬೇಕಾಗಿತ್ತು ಆದರೆ ಆ ರೀತಿ ಅವರು ಮಾಡಲಿಲ್ಲ. ಅದಕ್ಕಾಗಿ ನಮ್ಮ ಕೇಳಿಕೆ ಏನೆಂದರೆ ಈಗ ಡಿಸೆಂಬರ್ ೧೯,೨೦,೨೧ನೇ ತಾರೀಖಿನಲ್ಲಿ ನಮ್ಮ ರಾಜ್ಯದಲ್ಲಿ ಏನು ಘಟನೆಗಳು ನಡೆದಿವೆ ಆ ಬಗ್ಗೆ ನ್ಯಾಯಾಂಗ ತನಿಖೆ ಆಗಬೇಕು. ಮತ್ತು ಆ ಸಂದರ್ಭದಲ್ಲಿ ಆಸ್ತಿಪಾಸ್ತಿಗಳನ್ನು ಕಳೆದುಕೊಂಡಿರತಕ್ಕವರಿಗೆ ನೊಂದವರಿಗೆ ಪರಿಹಾರವನ್ನು ಕೊಡಬೇಕು. ಈ ಎರಡು ಮಾತುಗಳನ್ನು ನಾವು ಸರ್ಕಾರದವರಿಗೆ ಕೇಳಿದ್ದೇವೆ ಅದನ್ನು ಮಾನ್ಯ ಮುಖ್ಯಮಂತ್ರಿಗಳು ಮಾಡುತ್ತಾರೆಂದು ನಾವು ಭಾವಿಸಿದ್ದೇವೆ. ಈ ಹಿಂದೆ ಇಂಥಾ ಘಟನೆಗಳು ರಾಜ್ಯದಲ್ಲಿ ನಡೆದಾಗ ಬೇರೆಯವರು ಕೇಳುವುದಕ್ಕೆ ಮುಂಚೆ ಇಂಥಾ ಘಟನೆಗಳ ಬಗ್ಗೆ ನ್ಯಾಯಾಂಗ ತನಿಖೆಯನ್ನು ಮಾಡಿರುವ ಉದಾಹರಣೆಯನ್ನು ನಾನು ಬೇಕಾದರೆ ಕೊಡಬಲ್ಲೆ ಮತ್ತು ಇಂಥ ಘಟನೆಗಳು ನಡೆದಾಗ ನ್ಯಾಯಾಂಗ ತನಿಖೆಗಳನ್ನು ಮಾಡುವುದಕ್ಕೆ ನ್ಯಾಯಾಧೀಶರನ್ನು ನೆ ಮಕ ಮಾಡದೆ ಇರುವ ಉದಾಹರಣೆಗಳೂ ಇವೆ. ರಾಜ್ಯದಲ್ಲಿ ಆ ಘಟನೆಗಳು ನಡೆದಾಗ ನೊಂದ ಜನಗಳಿಗೆ ಪ್ರಾಣಹಾನಿಯನ್ನು ಕಳೆದುಕೊಂಡವರಿಗೆ ಮಾನಭಂಗಕ್ಕೆ ಒಳಗಾದ ಜನಗಳಿಗೆ ನಾವು ಸಮಾಧಾನ ಹೇಳುವುದಕ್ಕೆ ಮೊದಲು ನ್ಯಾಯಾಂಗ ತನಿಖೆಯನ್ನು ಮಾಡಬೇಕು ಆಸ್ತಿಪಾಸ್ತಿಯನ್ನು ಕಳೆದುಕೊಂಡ ನೊಂದ ಜನಗಳಿಗೆ ಪರಿಹಾರವನ್ನು ಕೊಡಬೇಕು ಎಂದು ನಾವುಸರ್ಕಾರದವರನ್ನು ಕಂಡು ಮಾತನಾಡಿದ್ದೇವೆ, ಆ ಬಗ್ಗೆ ಅವರು ಇಲ್ಲ ಎಂದು ಹೇಳಿಲ್ಲ. ಹೌದು ಎಂದು ಹೇಳಿಲ್ಲ ಆಮಾತು ಬೇರೆ ಮಾನ್ಯ ಮುಖ್ಯಮಂತ್ರಿಗಳು ಆಬಗ್ಗೆ ಚರ್ಚೆ ಮಾಡುವುದಕ್ಕೆ ನಾನು ತೆರೆದ ಮನಸ್ಸಿನಿಂದ ಇದ್ದೇನೆ ಎಂದು ಹೇಳಿದ್ದಾರೆ. ಹಾಗಾದರೆ ಅವರ ಮನಸ್ಸು ಯಾವಾಗ ತೆರೆದಿರುತ್ತದೆ. ಮುಚ್ಚಿರುತ್ತದೆ ಏಂದು ನಂಬಿಕೊಂಡು ಹೋಗೋಣ ಆ ಕ್ಕಾಗಿ ನಾವು ತಮ್ಮ ಮೂಲಕ ಸರ್ಕಾರಕ್ಕೆ ಅರಿಕೆ ಮಾಡಿಕೊಳ್ಳುತ್ತೇವೆ. ಆದ್ದರಿಂದ ನಮ್ಮ ಉದ್ದೇಶ ನಮ್ಮ ಗುರಿ ಸ್ಪಷ್ಟವಾಗಿದೆ. ಆದರ ಅರ್ಥ ತಮಗೆ ಆಗಿದೆ ಅದರ ನಿಲುವು ಏನು ಎಂಬುದರ ಬಗ್ಗೆ ಚರ್ಚೆ ಮಾಡಬೇಕು. ಅದಕ್ಕೆ ತಾವು ಇಚ್ಛೆ ಪಟ್ಟಿಲ್ಲ ಅದಕ್ಕೆ ಇಚ್ಛೆ ಪಟ್ಟರೆ ಈ ಸಮಸ್ಯೆಗೆ ಪರಿಹಾರವನ್ನು ಕಂಡುಹಿಡಿಯಬಹುದು. ಈ ಸಮಸ್ಯೆಗೆ ಪರಿಹಾರವನ್ನು ಕಂಡುಹಿಡಿಯುವುದಕ್ಕೆ ತಮಗೆ ಕಳಕಳಿ ಇದ್ದರೆ ಅದಕ್ಕೆ ಸಹಕರಿಸಬಹುದು. ಆ ಒಂದು ಕಳಕಳಿ ಇಲ್ಲದೇ ಹೋದರೆ ಸಹಕಾರ ಅಸಾಧ್ಯ ಈಗ ನಾವು ಎಲ್ಲಿಂದ ಹೊರಟಿದ್ದೇವೆಯೋ ಅಲ್ಲಿಗೆ ಬರುತ್ತೇವೆ ಏನು ಮಾಡಬೇಕೋ ಅದನ್ನು ಮಾಡುತ್ತೇವೆ ನಾನು ಇದನ್ನು ಬಹಳ ನೊಂದ ಮನಸ್ಸಿನಿಂದ ಹೇಳುತ್ತಿದ್ದೇನೆ ಇದನ್ನು ನಾವು ಎಷ್ಟು ಭಾರದಿಂದ ಪರಿಗಣಿಸಬೇಕೋ ಅಷ್ಟೆ ಭಾರದಿಂದ ಪರಿಗಣಿಸುತ್ತೇವೆ ಈವಿಚಾರದಲ್ಲಿ ಮಾನ್ಯ ಅಧ್ಯಕ್ಷರ ಮಧ್ಯಮಾತುಕತೆ ಆಗಬಾರದು. ನಾವು ತಮ್ಮನ್ನು ಯಾವುದೇ ಕಾರಣದಿಂದ ಲಘುವಾಗಿ ಕಾಣುವ ಉದ್ದೇಶವಿಲ್ಲ. ತಾವು ಸಹ ನಮ್ಮನ್ನು ಯಾವುದೇ ಕಾರಣದಿಂದ ಲಘುವಾಗಿ ಕಾಣಬಾರದು. ನಮ್ಮ ಉದ್ದೇಶವನ್ನು ಸ್ಪಷ್ಟಪಡಿಸುವುದಕ್ಕಾಗಿ ಈ ಸಭೆಯನ್ನು ಮುಂದಕ್ಕೆ ಹಾಕಿ, ಸರ್ಕಾರ ಇಚ್ಛೆಪಟ್ಟರೆ ನಾವು ಅವರ ಜೊತೆಯಲ್ಲಿ ಮಾತನಾಡುತ್ತೇವೆ ನಮ್ಮ ನಿಲುವು ಏನು ಎಂಬುದನ್ನು ನಾವು ಸ್ಪಷ್ಟ ಪಡಿಸುತ್ತೇವೆ. ಆದ್ದರಿಂದ ಈಗ ತಾವು ಈ ಸದನವನ್ನು ೧೫ ನಿಮಿಷಗಳ ಕಾಲ ಮುಂದಕ್ಕೆ ಹಾಕಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

† ಶ್ರೀ ಡಿ. ದೇವರಾಜಅರಸು.— ಮಾನ್ಯ ಅಧ್ಯಕ್ಷರೇ ನನ್ನ ಇಚ್ಛೆ ಪ್ರಕಾರ ಹೋಗಬೇಕಾದ ಅಗತ್ಯ ಇಲ್ಲ. ನಾನು ಈಗಾಗಲೇ ಹೇಳಿರತಕ್ಕ ಮಾತುಗಳನ್ನೇ ಪುನರುಚ್ಚಾರಣೆ ಮಾಡಬೇಕಾಗುತ್ತದೆ. ಅವರು ಮಾತನಾಡಿದ ಮಾತನ್ನು ಬಿಟ್ಟು ಹಿಂದಕ್ಕೆ ಹೋಗುತ್ತಿದ್ದಾರೆ ಶನಿವಾರದ ದಿವಸ ಸಭೆ ಸೇರಿದಾಗ, ಇವೊತ್ತು ಕಾರ್ಯಕಲಾಪಗಳನ್ನು ನಡೆಸುವುದು ಬೇಡ ಸೋಮವಾರದಿಂದ ಕಾರ್ಯಕಲಾಪಗಳನ್ನು ನಡೆಸೋಣ ಅಷ್ಟು ಹೊತ್ತಿಗೆ ನಾವು ಒಂದು ತೀರ್ಮಾನಕ್ಕೆ ಬರುತ್ತೇವೆ ಎಂದು ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇತರ ಮುಖಂಡರು ಹಾಗೂ ಶ್ರೀಮಾನ್ ದೇವೇಗೌಡರು ಹೇಳಿದರು. ಮತ್ತೆ ಇವೊತ್ತು ಸೋಮವಾರ ಸಭೆ ಸೇರಿದಾಗ ನಿನ್ನೆ ರಜಾ ಇದ್ದುದರಿಂದ ನಾವುಗಳು ಸಭೆ ಸೇರುವುದಕ್ಕೆ ಅವಕಾಶವಾಗಲಿಲ್ಲ ಆದ್ದರಿಂದ ಇವೊತ್ತು ಎರಡುಗಂಟೆಯವರೆಗೂ ಸಭೆಯನ್ನು ಮುಂದಕೆ ಹಾಕಿ ನಾವು ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ ಎಂದು ಅವರು ಕೇಳಿದರು ಆದ್ದರಿಂದ ಇವೊತ್ತು ಅವರಿಗೆ ಮೂರು ಗಂಟೆಯವರೆಗೂ ಸಭೆಯನ್ನು ಮುಂದಕ್ಕೆ ಹಾಕಿ ಅವಕಾಶವನ್ನು ಕೊಟ್ಟಿದ್ದು ಆಯಿತು. ಈಗ ಏನು ಹೇಳುತ್ತಿದ್ದಾರೆ ಎಂದರೆ ನಮಗೆ ಇನ್ನೂ ಸ್ವಲ್ಪ ಕಾಲಾವಕಾಶಬೇಕು ಇನ್ನೂ ಸ್ವಲ್ಪ ಕಾಲ ಸಭೆಯನ್ನು ಮುಂದಕ್ಕೆ ಹಾಕಿ ಎಂದು ಹೇಳುತ್ತಿದ್ದಾರೆ ಇದಕ್ಕೆ ನನ್ನ ಅಭ್ಯಂತರ ಇಲ್ಲ.

ನನ್ನ ಅಭಿಪ್ರಾಯ ಬೇಕಾಗಿಲ್ಲ ಎಂದರೆ ಹಾಗೆ ನಡೆಯುವುದಕ್ಕೆ ಆಗುವುದಿಲ್ಲ ನಮ್ಮಿಬ್ಬರದೇ ಅಲ್ಲ ಈ ಮನೆ ಎಲ್ಲರಿಗೂ ಸೇರಿದ್ದು. ವಿರೋಧಪಕ್ಷದ ನಾಯಕರು ಅವರ ಹಿಂದಿನ ಮಾತಿನ ಪ್ರಕಾರ ಅದನ್ನು ಹೇಳಲಿಕ್ಕೆ ಎಷ್ಟು ಟೈಂ ಬೇಕು ಎಂದು ಕೇಳುತ್ತಾರೋ ಅದಕ್ಕೆ ನಮ್ಮ ಅಭ್ಯಂತರವಿಲ್ಲ ಕೊಡೋಣ.

3-30 P.M.

SRI B. B. SAYANAK (Belgaum):—Sir, there is a deadlock in Assembly for the past two days. We are spending a lot of money and it is a waste money and waste of time. It is not a matter between the Ruling Party and the Janata Party but concerns others also. T ere was a discussion between the Chief Minister, the Leader of the Opposition and the President of the Janata Party for two days. There are other Parties also in this House. I request you to call a meeting of the Leaders of the respective opposition parties and the Ruling Party and let us resolve this deadlock. To have this meeting I request you to adjourn the House. for some time.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ. ನಾನು ಮಾತನಾಡುವುದಕ್ಕಿಂತ ಮೊದಲು ಒಂದು ಸ್ಪಷ್ಟೀಕರಣ ಮಾಡುವುದು ಅವಶ್ಯ. ನನಗೆ ಈ ಸಭೆಯ ಬಗ್ಗೆ ಮತ್ತು ತಮ್ಮ ಬಗ್ಗೆ ಸಂಪೂರ್ಣವಾದ ವಿಶ್ವಾಸ ಮತ್ತು ಗೌರವ ಇದೆ ಎನ್ನುವ ಮಾತನ್ನು ಸ್ಪಷ್ಟೀಕರಣ ಮಾಡುತ್ತಾ ಇದ್ದೇನೆ. ಮೊನ್ನೆ ಶನಿವಾರ ದಿವಸ ಮಾನ್ಯ ಮುಖ್ಯಮಂತ್ರಿಗಳು ನನ್ನನ್ನು ಮತ್ತು ಶ್ರೀಮಾನ್ ದೇವೇಗೌಡರನ್ನು ಕರೆದು ಚರ್ಚೆ ಮಾಡಿದ್ದಾರೆ, ಆ ಚರ್ಚೆಯಲ್ಲಿ ಅನೇಕ ವಿಷಯಗಳನ್ನು ಪರಿಗಣಿಸಿದ್ದೇವೆ. ಅವನ್ನು ಪರಿಗಣಿಸಿದ್ದಾದ ಮೇಲೆ ಅಲ್ಲಿ ನಡೆದ ವಿಚಾರಗಳನ್ನು ನಮ್ಮ ಪಕ್ಷದ ಮುಂದಿಟ್ಟು ಅದರ ಒಪ್ಪಿಗೆ ಪಡೆದು ಆದಮೇಲೆ ಅದನ್ನು ಸೋಮವಾರದ ದಿವಸ ನಿಮಗೆ ತಿಳಿಸುತ್ತೇನೆ ಎಂದು ಮುಖ್ಯಮಂತ್ರಿಗಳಿಗೆ ನಾನು ಮಾತು ಕೊಟ್ಟಿದ್ದೆ ಆದರೆ ಕಾರಣಾಂತರವಾಗಿ ಪಕ್ಷದಲ್ಲಿ ಚರ್ಚೆಮಾಡಿ ಅಲ್ಲಿ ನಡೆದಂಥ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ತಿಳಿಸಲಿಕ್ಕೆ ಸಾಧ್ಯವಾಗಲಿಲ್ಲ. ಆದುದರಿಂದ ಈ ಸಭೆಯನ್ನು ತಮ್ಮ ಸಹಕಾರ ದೃಷ್ಟಿಯಿಂದ ಒಂದು ಗಂಟೆ ಕಾಲ ಮುಂದಕ್ಕೆ ಹಾಕಲಾಯಿತು, ನಂತರ ನಾವು ಚರ್ಚೆ ನಡೆಸುತ್ತಿದ್ದಾಗ ಈ ಸಭೆ ಪ್ರಾರಂಭವಾಯಿತು ನಾವು ಇಲ್ಲಿಗೆ ಬಂದಮೇಲೆ ನಡೆದ ಘಟನೆ ತಮಗೆಲ್ಲಾ ಗೊತ್ತಿದೆ, ನಾನು ನಮ್ಮ ಪಕ್ಷದಲ್ಲಿ ಚರ್ಚೆ ಮಾಡಿದ್ದೇನೆ ನಾನು ಚರ್ಚೆ ಮಾಡಿದ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಕೇಳಬೇಕು ಎನ್ನುವ ಇಚ್ಛೆ ಇದ್ದರೆ ನಾನು ಹೇಳಲಿಕ್ಕೆ ತಯಾರಿದ್ದೇನೆ. ಸಮಸ್ಯೆ ಪರಿಹಾರವಾಗಬೇಕು, ಕಾರ್ಯಕ್ರಮಗಳು ಸುಗಮವಾಗಿ ನಡೆಯಬೇಕು ಎನ್ನುವ ಇಚ್ಛೆ ನನಗೂ ಇದೆ. ಅಲ್ಲಿ ನಡೆದ ಚರ್ಚೆಯನ್ನು ಮಾತುಕೊಟ್ಟ ಪ್ರಕಾರ ಹೇಳಲಿಕ್ಕೆ ನನಗೆ ಅವಕಾಶವಾಗಿಲ್ಲ, ಈ ಮನೆ ಪ್ರಾರಂಭವಾದುದರಿಂದ ಬಂದಿದ್ದೇನೆ ಮಾನ್ಯ ಮುಖ್ಯ ಮಂತ್ರಿಗಳಿಗೆ ಅಲ್ಲಿ ಏನು ಚರ್ಚೆಯಾಯಿತು ಎನ್ನುವುದನ್ನು ತಿಳಿದುಕೊಳ್ಳುವ ಇಚ್ಛೆ ಇದ್ದರೆ ಅದನ್ನು ಹೇಳಲಿಕ್ಕೆ ನಾನು ತಯಾರಿದ್ದೇನೆ. ಅದಕ್ಕೆ ಪರಿಹಾರ ಸಿಕ್ಕಬಹುದು ಎನ್ನುವ ಭರವಸೆ ನನಗೆ ಇದೆ. ಅವರಿಗೆ ತಿಳಿದುಕೊಳ್ಳುವ ಇಚ್ಛೆ ಇದ್ದರೆ ಅದಕ್ಕೆ ಅನುಕೂಲಮಾಡಿಕೊಡುವುದಕ್ಕಾಗಿ ತಾವು ಮುಂದಿನ ಕ್ರಮ ಕೈಗೊಳ್ಳಬಹುದು.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ವಿರೋಧಪಕ್ಷದ ನಾಯಕರು ಹೇಳುವುದಕ್ಕೆ ಎಷ್ಟು ಕಾಲವಕಾಶ ಬೇಕು ಎಂದು ಹೇಳುತ್ತಾರೋ ಅದಕ್ಕೆ ನನ್ನ ಅಭ್ಯಂತರವಿಲ್ಲ. ಅವರಿಗೆ ಮಾತನಾಡಬೇಕು ಎನ್ನುವ ಇಚ್ಛೆ ಇದ್ದರೆ ಅವರು ಇಷ್ಟು ಕಾಲಾವಕಾಶ ಬೇಕು ಎಂದು ಕೇಳಿಬಿಡಲಿ. ಅವರು ಹಿಂದೆ ಕೊಟ್ಟ ಮಾತಿನ ಪ್ರಕಾರ ನಡೆದುಕೊಂಡು ಹೋಗೋಣ ನಾನು ಯಾವಾಗಬೇಕಾದರೂ ಸಿಗುತ್ತೇನೆ, ತಾವು ಮಾತನಾಡಬಹುದು. ಸಭೆಯನ್ನು ಮುಂದುವರೆಸಬೇಕು ಎನ್ನುವ ಇಚ್ಛೆ ನಮಗೆ ಇಲ್ಲ. ಈಗ ಮಾನ್ಯ ವಿರೋಧಪಕ್ಷದ ನಾಯಕರ ಇಚ್ಛೆ ಮೇರೆಗೆ ಸಭೆಯನ್ನು ಮುಂದುವರಿಸಬೇಕಾಗಿರುವುದು.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾವಿಬ್ಬರೂ ಫ್ರಿಸ್ಟೀಜ್ ಮೇಲೆ ನಿಂತಂತಾಗಿದೆ. ನಾನು ಮಾನ್ಯ ಮುಖ್ಯಮಂತ್ರಿಗಳವರ ಜೊತೆಯಲ್ಲಿ ಮಾತನಾಡಿದಾಗ ನಮ್ಮ ಪಕ್ಷದ ಅಭಿಪ್ರಾಯವನ್ನು ತಿಳಿದುಕೊಂಡು ನಿಮಗೆ ತಿಳಿಸುತ್ತೇನೆ ಎಂದು ಹೇಳಿದ್ದೆ ಬೆಳಿಗೆ ಫೋನ್ ಮಾಡಿದಾಗ ನಮ್ಮ ಪಕ್ಷದ ಅಭಿಪ್ರಾಯ

ತಿಳಿದುಕೊಳ್ಳುವುದಕ್ಕೆ ಆಗಲಿಲ್ಲ ಎಂದು ಸ್ಪಷ್ಟಪಡಿಸಿದ್ದೇನೆ. ಪಕ್ಷದ ಸಭೆ ಆದಮೇಲೆ ಆ ವಿಚಾರವನ್ನು ತಮಗೆ ತಿಳಿಸಬೇಕಾದ್ದು ನನ್ನ ಕರ್ತವ್ಯ, ಕೇಳಬೇಕಾದ್ದು ನಿಮ್ಮ ಕರ್ತವ್ಯ ಆದುದರಿಂದ ಇದು ಸುಗಮ ವಾಗುವುದಕ್ಕೆ ತಾವು ಏನುಬೇಕೋ ಆದನ್ನು ಮಾಡಿ.

ಶ್ರೀ ಸಿ. ಎಂ. ಇಬ್ರಾಹಿಂ.—ಮಾನ್ಯ ಅಧ್ಯಕ್ಷರೇ, ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈ ಸಭೆಯನ್ನು ಸುಸೂತ್ರವಾಗಿ ನಡೆಸಿಕೊಂಡು ಹೋಗಬೇಕು ಎನ್ನುವುದು ತಮ್ಮ ಇಚ್ಛೆ. ಆದುದರಿಂದ ಇದನ್ನು ಇವರಿಬ್ಬರಿಗೂ ಬಿಡದೆ ನಿಮ್ಮ ಇಚ್ಛೆ ಪ್ರಕಾರ ಸಭೆಯನ್ನು ಅರ್ಧ ಗಂಟೆ ಕಾಲ ಅಡ್ಜರ್ನ್‌ಮಾಡಿ ವಯಾವಿಂಡಿಯಾ ಮಾಡಿ ಮತ್ತೆ ಸೇರಿಸಿ. ಈ ವಿಷಯ ನಿಮಗೆ ಸೇರಿದ್ದು.

ಅಧ್ಯಕ್ಷರು. ಮಾನ್ಯ ವಿರೋಧಪಕ್ಷದ ನಾಯಕರು ಎಷ್ಟು ಕಾಲಾವಕಾಶ ಬೇಕು ಎಂದು ಕೇಳಲಿ.

ಶ್ರೀ ಎಸ್. ಆರ್ ಬೊಮ್ಮಾಯಿ ಅದು ಮಾನ್ಯ ಮುಖ್ಯಮಂತ್ರಿಗಳನ್ನು ಅವಲಂಬಿಸಿದೆ.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ವಿರೋಧಪಕ್ಷದ ನಾಯಕರು ಏನು ಹೇಳುತ್ತಾರೋ ಅವನ್ನು ಹೇಳಲಿ. ಅವರು ಹೇಳದೆಹೋದರೆ ನಾನೇನೂ ಮಾಡುವುದಕ್ಕಾಗುವುದಿಲ್ಲ. ವಿರೋಧ ಪಕ್ಷದ ನಾಯಕರಿಗೆ ಕಾಲಾವಕಾಶ ಬೇಕಾದರೆ ಕೊಡಬೇಡಿ ಎಂದು ನಾನು ಹೇಳಲಿಲ್ಲ.

ಅಧ್ಯಕ್ಷರು.—ಕಾಲುಗಂಟೆ ಹೆಚ್ಚಿಗೆ ಬೇಕಾದರೆ ತೆಗೆದುಕೊಳ್ಳಿ.

ಶ್ರೀ ಜಿ. ಮಾದೇಗೌಡ —ಇಬ್ಬರು ಮುಖಂಡರೂ ಕೂಡ ಏಕಾಭಿಪ್ರಾಯಕ್ಕೆ ಬಂದಿದ್ದಾರೆ ಎಂದರಿ ನಾನು ತಿಳಿದುಕೊಂಡಿದ್ದೇನೆ, ಇಲ್ಲಿ ಏನು ಒಂದು ಸಮಸ್ಯೆ ಉದ್ಭವವಾಗಿದೆ ಅದನ್ನು ಬಗೆಹರಿಸಬೇಕು, ಅದಕ್ಕೆ ಪರಿಹಾರ ಸಿಕ್ಕಬೇಕು. ಎನ್ನುವುದು ಎಲ್ಲರಲ್ಲೂ ಇದೆ ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಮೊದಲನೆಯದಾಗಿ.....

(ಸಭೆಯಲ್ಲಿ ಗೊಂದಲ ಉಂಟಾಯಿತು)

ಈ ಸಭೆ ಪಂಚಾಯಿತಿ ಸಭೆಯಲ್ಲ, ಇದು ನಡೆಯುವುದಕ್ಕೆ ಕಾನೂನು ಇದೆ ಇವರು ದೇಶವನ್ನೆಲಾ ಮಾರಿಬಿಟ್ಟಿದ್ದಾರೆಂದು ತಿಳಿದುಕೊಂಡಿದ್ದಾರೆ. ನಾವು ಈ ದೇಶವನ್ನು ಮಾರಿಬಿಟ್ಟಿಲ್ಲ. ನಿಮಗೆ ಎಷ್ಟು ಅಧಿಕಾರವಿದೆಯೋ ನಮಗೂ ಅಷ್ಟೇ ಅಧಿಕಾರವಿದೆ.

ಅಧ್ಯಕ್ಷರು. – ತಾವು ಎಷ್ಟು ಕಾಲ ಬೇಕಾಗುತ್ತದೆ ಎಂದು ಹೇಳುತ್ತೀರೋ ಅಷ್ಟು ಕಾಲ ಅಡ್ಜರ್ನ್ ಮಾಡುತ್ತೇನೆ.

SRI D, DEVARAJ URS.—The Leader of the Opposition may tell the Speaker how much time he wants-whether one hour, half hour or 15 minutes. He can take as much time as he wants.

SRI S. R. BOMMAI.—I am not begging for time Our discussion depends upon the Leader of the House and myself.

SRI D. DEVARAJ URS.—If you want time, I have no objection, you can take it. You have already taken two days time.

MR. SPEAKER.—The House stands adjourned to meet again at 4-30 P.M.

The House adjourned at Fifty two Minutes past Three of the Clock and reassembled at Fifty Minutes past Four of the Clock,

[*Mr. Speaker in the chair.*]

MR SPEAKER.—The House stands adjourned to meet again at 1-00 P.M. tomorrow

The House adjourned at Fifty one Minutes past Four of the Clock to meet again at One of the Clock on Tuesday, the 23rd January 1979.